‘ಉತ್ಪ್ರೇಕ್ಷೆ’ ಅನಿಸಿದರೂ ಅಡ್ಡಬಾಯಿ ಹಾಕಲಿಲ್ಲ ಮಮತಾ. ಮುಂದುವರಿಯಿತು ಕತೆ. ನಳಿನಿಗೆ ಚೊಚ್ಚಲ ಮಗಳು ಹುಟ್ಟಿದಾಗ ಆ ಕಂದನ ಮುದ್ದುಮುಖ ನೋಡಿ ‘ಸ್ವರ್ಗಕ್ಕೆ ಮೂರೇ ಗೇಣು’ ಅನ್ನುವಷ್ಟು ಸಂತುಷ್ಟಳಾಗಿದ್ದಳು ಅವಳು. ತಮ್ಮಿಬ್ಬರ ಪ್ರೀತಿಯ ಫಲವನ್ನು ನೋಡಲು ಗಂಡ ಓಡೋಡಿ ಬರುತ್ತಾನೆಂದು ಅವಳು ಕಾತರಿಸಿ ಕಾದಿದ್ದರೆ ಹಾಗೇನಾಗಲಿಲ್ಲ. ಫೋನ್ ಮಾಡಿದಾಗಲೆಲ್ಲಾ ಏನೇನೋ ಕೆಲಸದ ನೆಪ ಹೇಳಿ ತಪ್ಪಿಸಿಕೊಳ್ಳುತ್ತಿದ್ದ ಗಂಡ ಮೂರನೆಯ ತಿಂಗಳಲ್ಲಿ ಮಗುವಿನ ನಾಮಕರಣ ಇಟ್ಟುಕೊಂಡಾಗ ಅನಿವಾರ್ಯವಾಗಿ ಹಾಜರಿ ಹಾಕಿದ್ದ. ಆಗಷ್ಟೇ ಮುಖ ನೋಡಿ ಕೆಂಗುಲಾಬಿ ಬಿರಿದಂತೆ ನಗಲು ಕಲಿತಿದ್ದ ಮಗಳು ಆ ಅಪ್ಪನ ಮೇಲೆ ಯಾವುದೇ ಮೋಹಪಾಶ ಬೀಸಿದಂತೆ ಕಾಣಿಸಿರಲಿಲ್ಲ. ಇದರ ಮರ್ಮ ಗೊತ್ತಿಲ್ಲದೆ ಇಲ್ಲ ನಳಿನಿಗೆ. ಅವನಿಗೆ ಗಂಡುಮಗುವೇ ಹುಟ್ಟುತ್ತದೆಯೆಂದು ಯಾರೋ ಜಾತಕ ನೋಡಿ ಹೇಳಿದ್ದರಂತೆ. ‘ಮಗ..., ಮಗ...’ ಎಂದು ಹಂಬಲಿಸುತ್ತಿದ್ದವನನ್ನು ಕಂಡು ಚೊಚ್ಚಲ ಬಸುರಿಗೆ ನಗೆ. ‘ಮಗನೋ, ಮಗಳೋ, ಮೊದಲನೆಯದು ಯಾವುದಾದರೇನು?’ ಎಂದು ಅವಳು ಹೇಳಿದರೆ ಗಂಡ ಅಪಶಕುನ ಕೇಳಿಸಿಕೊಂಡವನಂತೆ ಕುಮುಟಿ ಬೀಳುತ್ತಿದ್ದ. ‘ಒಳ್ತು ಅನ್ನೇ...’ ಎಂದು ಓಬೀರಾಯನ ಕಾಲದಲ್ಲಿದ್ದವನ ಹಾಗೆ ಮಾತಾಡುತ್ತಿದ್ದ. ‘ನೀವು ಏನೇ ಹೇಳಿದ್ರೂ ಹೊಟ್ಟೆಯಲ್ಲಿರೋದು ಬದಲಾಗುತ್ತಾ?’ ನಳಿನಿ ನಗೆಚಾಟಿಕೆ ಮಾಡಿದ್ದು ದುಬಾರಿಯಾಗಿತ್ತು. ‘ಡಾಕ್ಟರ ಹತ್ರ ಹೋಗಿ ಪರೀಕ್ಷೆ ಮಾಡಿಸ್ಕೊಂಡು ಬರೋಣ’ ಎಂದು ಗಂಟು ಬಿದ್ದಿದ್ದ ಗಿರಾಕಿ.

‘ಹೆಣ್ಣು ಅಂದ್ರೆ ಏನ್ಮಾಡ್ತೀರಿ?’

‘ಮಾಡೋದೇನು? ಈಗೆಲ್ಲಾ ಬೇಡದಿರೋದನ್ನ ತೆಗೆಸೋದು ಸುಲಭ ಕಣೇ...’ ಹೀಗೆನ್ನುವಾಗ ಮನುಷ್ಯನಿಗೆ ಒಂದಿಷ್ಟಾದರೂ ಪಾಪಪ್ರಜ್ಞೆ ಕಾಡಿತ್ತಾ? ಹಾಗೆನಿಸಿರಲಿಲ್ಲ ನಳಿನಿಗೆ. ಮದುವೆಯಾದ ಎರಡು ವರ್ಷಗಳಲ್ಲಿ ಗಂಡನ ಒಲುಮೆಯನ್ನಷ್ಟೇ ಕಂಡು ಗೊತ್ತಿದ್ದವಳಿಗೆ ಅವನ ಮತ್ತೊಂದು ಮುಖದ ಪರಿಚಯವಾಗಿ ಮೈಮೇಲೆ ಮುಳ್ಳೆದ್ದಿತ್ತು. ಗಂಡನ ವರ್ತನೆಯ ಹಿಂದೆ ಯಾವ ಕಾರಣ ಇದೆಯೆಂದು ಬಾಯಿ ಬಿಡಿಸಿದ್ದಳು ನಳಿನಿ. ಇವನ ಅಜ್ಜನಿಗೆ ಮೊದಲು ಹುಟ್ಟಿದ್ದು ಇವನ ಅಪ್ಪ. ನಂತರ ಪಂಚಕನ್ಯೆಯರ ಹಾಗೆ ಸಾಲಿಗೆ ಐದು ಹೆಣ್ಣುಮಕ್ಕಳು. ‘ಅವರಿಗೆಲ್ಲಾ ಗಂಡು ಹುಡುಕಿ, ಮದುವೆ, ಬಾಣಂತನ ಅಂತ ಮಾಡಿ ಮುಗಿಸೋ ಹೊತ್ತಿಗೆ ನಮ್ಮಪ್ಪ ಕೈಲಿ ಕರಟ ಹಿಡಿಯೋ ಪರಿಸ್ಥಿತಿಗೆ ಬಂದಿದ್ದ. ಏಳೇಳು ಜನ್ಮಕ್ಕೂ ಈ ಹೆಣ್ಣುಮಕ್ಕಳ ಸಾವಾಸ ಸಾಕು ಅನ್ನುವಷ್ಟು ರೋಸಿ ಹೋಗಿದ್ದ’ ಅಂದಿದ್ದ ನಳಿನಿಯ ಗಂಡ.

‘ಯಾಕೆ? ನಿಮ್ಮಜ್ಜನಿಗೆ ಜವಾಬ್ದಾರಿ ಇರ್ಲಿಲ್ವಾ? ನಿಮ್ಮಪ್ಪ ಯಾಕೆ ಎಲ್ಲದಕ್ಕೂ ತಲೆ ಕೊಟ್ಟಿದ್ದು?’ ಕುತೂಹಲದಿಂದ ಕೇಳಿದ್ದಳು ನಳಿನಿ.

‘‘ಗಾದೆ ಗೊತ್ತಿಲ್ಲನೇ? ‘ಹಿರಿ ಮಗನಾಗ್ಬೇಡ, ಹಿತ್ತಿಲ ಬಾಗಿಲಾಗ್ಬೇಡ’ ಅಂತ ಗಾದೆ ಇದೆ. ಹಿರೀ ಮಗ ಆದೋನು ಎಲ್ಲಾ ನೋಡ್ಕೋಬೇಕು ಅನ್ನೋದು ಅಜ್ಜನ ಲಾ ಪಾಯಿಂಟು...”

‘ಅಷ್ಟೇನಾ? ಅಷ್ಟಕ್ಕೆ ನೀವು ಮಗಳು ಬೇಡ ಅನ್ನೋದಾ? ಮಗಳೇ ಆದರೆ ಸಾಕು ಒಬ್ಬಳೇ...’

‘ಅದು ಹ್ಯಾಗಾಗುತ್ತೆ? ಗಂಡುಮಕ್ಕಳಿಲ್ಲ ಅಂದ್ರೆ ವಯಸ್ಸಾದ ಕಾಲಕ್ಕೆ ಕಷ್ಟ ಕಣೇ. ಹಕ್ಕಿನಿಂದ ಯಾರ ಜೊತೆ ಇರೋಕಾಗುತ್ತೆ? ಯಾರು ನೋಡ್ಕೋತಾರೆ?’

‘ಯಾರು ಯಾಕೆ ನೋಡ್ಕೋಬೇಕು? ನಮ್ಮ ಬದುಕಿಗೆ ಬೇಕಾದಷ್ಟು ದುಡಿದಿಟ್ಕೋಬೇಕಪ್ಪಾ. ಮಗಳಾದ್ರೆ ಅವಳು ಯಾಕೆ ನೋಡ್ಕೋಬಾರ್ದು?’

‘ನಿಂಗೆ ಪ್ರಪಂಚ ಗೊತ್ತಿಲ್ಲ ಕಣೇ. ಅಷ್ಟೆಲ್ಲಾ ಸಾಲ ಸೋಲ ಮಾಡಿ ಹೆಣ್ಣುಮಕ್ಕಳನ್ನ ದಾಟಿಸಿದ್ದೇ ಬಂತು. ಕಷ್ಟ ಅಂದ್ರೆ ನಮ್ಮಪ್ಪನಿಗೆ ಒಬ್ಬರಾದ್ರೂ ಸಹಾಯ ಮಾಡಿದ್ರಾ? ಎಲ್ರಿಗೂ ಅವರವರ ಸ್ವಂತ ಸುಖಾನೇ ಮುಖ್ಯ ಆಯ್ತು’.

ತಲೆಬುಡವಿಲ್ಲದ ಮಾತಾಡುತ್ತಾನೆ ಗಂಡ ಎಂದು ನಳಿನಿಗೆ ಅನಿಸಿತ್ತು. ‘ಮೊದಲು ಆರೋಗ್ಯವಾಗಿರುವ ಮಗು ಹುಟ್ಟಲಿ. ಮಗಳೇ ಆದರೆ ಅದರ ಮುಖ ನೋಡಿ ಬದಲಾಗದಿದ್ದಷ್ಟು ಗಂಡ ಬುದ್ಧಿಗೇಡಿಯಲ್ಲ’ ಎಂದು ಅವಳ ನಂಬಿಕೆ. ಆ ನಂಬಿಕೆ ಸುಳ್ಳು ಅನ್ನುವ ಹಾಗೆ ಮಗಳು ಹುಟ್ಟಿದಾಗ ಅವಳನ್ನು ನೋಡಲು ಬರದೆ ತನ್ನ ಅಸಮಾಧಾನವನ್ನು ತೋರಿಸಿಕೊಂಡಿದ್ದ ಗಂಡ.

‘ಮುಂದೆ?’ ಕೇಳಬೇಕೆಂದು ತುರಿಸಿತು ಮಮತನ ನಾಲಿಗೆ. ಆದರೆ ತನ್ನ ಕುತೂಹಲವನ್ನು ತಡೆದಿಟ್ಟುಕೊಂಡಳು ಮಮತಾ.

ಮುಂದುವರಿಯಿತು ಕತೆ. ಗಂಡನ ಮನೋಧರ್ಮ ಗೊತ್ತು ಮಾಡಿಕೊಂಡಿದ್ದ ನಳಿನಿ ಎರಡನೆಯ ಮಗು ಬೇಡವೆಂದು ತೀರ್ಮಾನಿಸಿದ್ದಳು. ಆದರೆ ಗಂಡನಿಗೆ ವಂಶೋದ್ಧಾರಕ ಬೇಕೆಂಬ ಚಪಲ. ಒಂದರ್ಥದಲ್ಲಿ ಅವಸರ. ಮಗಳಿಗೆ ಒಂದೂವರೆ ವರ್ಷ ಆಗುವುದರಲ್ಲಿ ಮತ್ತೆ ಬಸುರಾಗಿದ್ದಳು ನಳಿನಿ. ಮಗು ಹೆಣ್ಣೋ, ಗಂಡೋ ಪತ್ತೆ ತೆಗೆಸಬೇಕೆಂಬ ಗಂಡನ ಹರಸಾಹಸಕ್ಕೆ ಅವಳು ಕಠಿಣ ನಿಲುವು ತಳೆದು ನಿರಾಕರಣೆಯ ಮಾತಾಡಿದ್ದಳು. ‘ಯಾವುದಾದ್ರೂ ಆಗಲಿ, ಇಲ್ಲಿಗೆ ಸಾಕು’ ಅಂದಿದ್ದಳು.

ಗಂಡ ಅದೆಷ್ಟು ಜನರ ಹತ್ತಿರ ಶಾಸ್ತ್ರ

